1ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ
ಬೆಂಗಳೂರು ನಗರ
ಸಿ.ಸಿ. ನಂ. 2018-2022

ಸಿಡಬ್ಲೂ - 4ಪಿಡಬ್ಲೂ-2

ಸಾಕ್ಷಿದಾರರ ಹೆಸರು : ಶ್ರವಣಕುಮಾರ
ತಂದೆಯ ಹೆಸರು : ಕೃಷ್ಣರಾವ್ ಪಾಟೀಲ
ವಯಸ್ಸು : 49 ವರ್ಷ
ಕೆಲಸ : ವ್ಯಾಪಾರ
ವಾಸ : ನಾಗರಭಾವಿ, ಬೆಂಗಳೂರು

ಸಾಕ್ಷಿಯನ್ನು ದಿನಾಂಕಃ 26-03-2026 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.
ಮುಖ್ಯ ವಿಚಾರಣೆ ಹಿ.ಸ.ಸಾ.ಅ. ರವರಿಂದಃ

ನನಗೆ ಚಾಸಾ 5, 6, 7 ಮತ್ತು 1 ಮತ್ತು 3 ನೇ ಆರೋಪಿಗಳು ಗೊತ್ತು. ಸಾಕ್ಷಿಯು ಒಂದು ಪಂಚನಾಮೆಯಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 1 ಎಂದು ಸಾಕ್ಷಿಯ ಸಹಿಯನ್ನು ನಿಪಿ. 1 ಎ ಎಂದು ಗುರುತಿಸಲಾಯಿತು. ನಾನು ನಿಪಿ. 1 ಕ್ಕೆ ನಾಗರಭಾವಿಯ ಶಾಖೆಯ ಮಣಪ್ಪುರಂ ಗೋಲ್ಡ ಫೈನಾನ್ಸ ನಲ್ಲಿ ಚಾಸಾ 7 ರವರು ಅಡಮಾನ ಇಟ್ಟಿದ್ದ ಒಂದು ಬ್ರಾಸಲೇಟ್, 3 ಚೈನ್, 2 ಕಿವಿ ಓಲೆಯನ್ನು ವಶಕ್ಕೆ ಪಡೆದ ವಿಚಾರವಾಗಿ ಸಹಿ ಮಾಡಿರುತ್ತೇನೆ. ಆ ಸ್ವತ್ತುಗಳು ಕಳ್ಳತನದ ಸ್ವತ್ತುಗಳಾಗಿರುತ್ತವೆ. 1 ಮತ್ತು 3 ನೇ ಆರೋಪಿಗಳು ಕಳ್ಳತನ ಮಾಡಿರುತ್ತಾರೆ ಎಂದು ಹೇಳಿದ್ದರು. ಸದರಿ ಒಡವೆಗಳ ಭಾವಚಿತ್ರವನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಅದನ್ನು ನಿಪಿ. 2 ಎಂದು ಗುರುತಿಸಲಾಯಿತು. 1 ಮತ್ತು 3 ನೇ ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ.

ಪಾಟೀ ಸವಾಲು ಆರೋಪಿತರ ಪರ ವಕೀಲರಿಂದಃ

ಪೊಲೀಸರು ಮಹಜರ್ ಗೆ ಬರಲು ನೋಟೀಸನ್ನು ಕೊಟ್ಟಿರಲಿಲ್ಲ. ನಾನು ಮಹಜರ್ ಗೆ ದಿ. 15 ನೇ ತಾರೀಖು ಸಂಜೆ ಅಥವಾ ಮಧ್ಯಾನ್ನ 03.30 ಗಂಟೆಗೆ ಸಹಿ ಹಾಕಿರುತ್ತೇನೆ. ಪೊಲೀಸರು ಸಹಿಯನ್ನು ನಾಗರಭಾವಿಯ ಶಾಖೆಯ ಮಣಪ್ಪುರಂ ಗೋಲ್ಡ ಫೈನಾನ್ಸ ನಲ್ಲಿ ಪಡೆದರು. ಸಹಿಯನ್ನು ಪಡೆದಾಗ ಆರೋಪಿಗಳು, ಪೊಲೀಸರು ಮತ್ತು ಆರೋಪಿಯ ತಾಯಿ, ಸಾಕ್ಷಿದಾರರು ಗಜೇಂದ್ರ ಇದ್ದರು. ಆ ಸ್ಥಳದಲ್ಲಿ ಚಾಸಾ 6

ರವರು ಇರಲಿಲ್ಲ ಎಂದರೆ ನನಗೆ ನೆನಪಿಲ್ಲ. ಮಹಜರ್ ನ್ನು ಅದೇ ಸ್ಥಳದಲ್ಲಿ ಬರೆದರು. ಪ್ರಿಂಟ್ ನ್ನು ಅಲ್ಲೇ ತೆಗೆದರು. ಪೊಲೀಸರು ಯಾವುದೇ ಪ್ರಿಂಟರ್ ನ್ನು ಆ ಸ್ಥಳಕ್ಕೆ ತಂದಿರಲಿಲ್ಲ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಹಜರ್ ಸ್ಥಳ 1 ನೇ ಮಹಡಿಯಲ್ಲಿ ಇದೆ. ಚೆಕ್ಕುಬಂದಿ ಗೊತ್ತಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಇದೇ ತರಹ ಹೇಳಬೇಕು ಎಂದು ಹೇಳಿ ಕೊಟ್ಟಿದ್ದರಿಂದ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಒಡವೆಗಳನ್ನು ಯಾರು ಅಡಮಾನ ಇಟ್ಟಿಲ್ಲ ಎಂದರೆ ಸರಿಯಲ್ಲ. ನಾನು ನಾಗರಭಾವಿಯಲ್ಲಿ ಇದ್ದೇನೆ. ನಿಪಿ. 1 ಕ್ಕೆ ಸಹಿ ಹಾಕಿ ನಾಗರಾಜ ರವರಿಗೆ ಕೊಟ್ಟೆ. ನಿಪಿ. 1 ರ ಮೂಲ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಯಿತು.)

ಓ ಹೇ ಕೇ ಸ ಇ ಒ

1 ನೇ ಅ. ಮು. ನ್ಯಾ.ದಂ. ನ್ಯಾ